# ನವಿಲುಗನ್ನಡಿ

▸ ಆಕರ್ಷಕ ಮುಖಪುಟದ ಫೆಬ್ರುವರಿ ಸಂಚಿಕೆಯಲ್ಲಿ ಕತೆ, ಸಂದರ್ಶನ, ಪ್ರಬಂಧ, ಕವಿತೆ ಸೇರಿದಂತೆ ಬರಹಗಳ ವೈವಿಧ್ಯವಿದೆ. 'ಹಾಡಿನೊಳಗೊಂದು ಹಾಡಾಗಿ ಅನುವಾದ' ಅನುವಾದಕಿ ಪದ್ಮಾ ರಾಮಚಂದ್ರ ಶರ್ಮ ಸಂದರ್ಶನ (ಸಂ: ಹೇಮಾ ಎಸ್.) ಆಪ್ತವಾಗಿದೆ.

**ಬಿ.ಆರ್. ಅಣ್ಣಾಸಾಗರ, ಸೇಡಂ**

▸ ರಾಜಕುಮಾರ ಕುಲಕರ್ಣಿ ಅವರ ಕತೆ 'ಮುಖವಾಡ' ಮನೋಜ್ಞವಾಗಿದೆ. ಪದ್ಮಾ ರಾಮಚಂದ್ರ ಶರ್ಮ ಸಂದರ್ಶನ ಹಾಗೂ ವಿಮರ್ಶಕ ಗಿರಡ್ಡಿ ಗೋವಿಂದರಾಜ ಕುರಿತು ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಬರಹ (ಮೂರ್ತರೂಪ: ಗಿರಡ್ಡಿ ಗೋವಿಂದರಾಜ) ಗಮನ ಸೆಳೆದವು.

**ನೀಲಮ್ಮ ಕುಮಾರಪ್ಪ, ಲಿಂಗಸುಗೂರು**


▸ ಹೊರೆಯಾಲ ದೊರೆಸ್ವಾಮಿ ಅವರ ನೆನಪಿನ ಚಿತ್ರ 'ಕುಕ್ಕರಹಳ್ಳಿ ಕೆರೆ'ಯಲ್ಲಿ ಪ್ರಕೃತಿ ಮತ್ತು ಮನುಷ್ಯರ ಏಳುಬೀಳುಗಳ ಚಿತ್ರಣ ಮನೋಜ್ಞವಾಗಿದೆ. ಪರಸ್ಪರ ವಿರೋಧಾತ್ಮಕ ವಸ್ತು ಹೊಂದಿದಂತೆ ಕಾಣುವ 'ನಂಬಿಕೆಯ ಮಾತು' (ಚಿಂತಾಮಣಿ ಕೊಡ್ಲೆಕೆರೆ), 'ಮೋಕ್ಷ' (ಟಿ.ಎಂ. ಶೇಷಗಿರಿ ತುಮರಿ) ಕತೆಗಳು ಸ್ವಾರಸ್ಯಕರವಾಗಿವೆ.

**ಟಿ.ಎಂ. ರಮೇಶ, ಸಿದ್ದಾಪುರ**

▸ 'ಕುಕ್ಕರಹಳ್ಳಿ ಕೆರೆ' ಬರಹ ಇಂದು ಎಲ್ಲಾ ಕೆರೆಗಳಿಗೆ ಬಂದೊದಗಿರುವ ದುಃಸ್ಥಿತಿಗೆ ಕನ್ನಡಿ ಹಿಡಿದಂತಿದೆ. ಕುಕ್ಕರಹಳ್ಳಿ ಕೆರೆ ಏರಿ ಮೇಲೆ ಅಡ್ಡಾಡಿದ ಅನುಭವವಾಯಿತು.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

▸ ಶಾ.ಮಂ. ಕೃಷ್ಣರಾಯ ಅವರ




'ಗೋವಾದ ಸಂಭ್ರಮ–ಸಂಘರ್ಷಕ್ಕೆ ಮಾವ್‌ಜೊ ಕಥಾಕನ್ನಡಿ' ಲೇಖನ ಓದಿ ಖುಷಿಯಾಯಿತು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕತೆಗಾರ ದಾಮೋದರ ಮಾವ್‌ಜೋ ಬದುಕು–ಬರಹದ ಚಿತ್ರಣ ಲೇಖನದಲ್ಲಿ ಆಪ್ತವಾಗಿ ಬಂದಿದೆ.

**ಸೇತುರಾವ್ ಕುಲಕರ್ಣಿ, ಬೆಂಗಳೂರು**

▸ 'ಮೂರ್ತರೂಪ: ಗಿರಡ್ಡಿ ಗೋವಿಂದರಾಜ' ಅತ್ಯುತ್ತಮ ಲೇಖನ. ಗಿರಡ್ಡಿ ಗೋವಿಂದರಾಜರೊಂದಿಗಿನ ದಶಕಗಳ ಗೆಳೆತನವನ್ನು, ಅವರ ವ್ಯಕ್ತಿತ್ವವನ್ನು ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಮನಕ್ಕೆ ಮುದನೀಡುವಂತೆ ಕಟ್ಟಿಕೊಟ್ಟಿದ್ದಾರೆ.

**ಶ್ಯಾಮಸುಂದರ ಬಿದರಕುಂದಿ, ಹುಬ್ಬಳ್ಳಿ**

▸ ಎನ್. ಸಂಧ್ಯಾ ರಾಣಿ ಅವರ ಕತೆ 'ಟ್ರೂಥ್ ಆರ್ ಡೇರ್' ಆಕರ್ಷಕ ಶೈಲಿ, ನಿರೂಪಣಾ ತಂತ್ರ, ವಿಷಯ ಆಯ್ಕೆಯ ದೃಷ್ಟಿಯಿಂದ ಉತ್ತಮವಾಗಿದೆ. ಕತೆಯ ಗುಂಗಿನಿಂದ ಎಷ್ಟೊ ದಿನ ಹೊರಗೆ ಬರಲು ಸಾಧ್ಯವಾಗಲಿಲ್ಲ.

**ಕೆ.ವಿ. ರಾಜಲಕ್ಷ್ಮಿ, ಬೆಂಗಳೂರು**

▸ ಅಜ್ಞಾನಿ ಅವರ ಕವಿತೆ 'ಕನ್ನಡ ಪದಗೊಳ್' ಖುಷಿ ನೀಡಿತು.

**ಗಿರೀಶ್ ಎಂ.ಕೆ., ಬೆಂಗಳೂರು**